ಅಸಲು ದಾವೆ ನಂ.84/2021 ಪಿ.ಡಬ್ಲೂಃ 1

ದಿನಾಂಕಃ 07/02/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು 1 ಮತ್ತು 2 ನೇ ಪ್ರತಿವಾದಿ ಪರವಾಗಿ ಶ್ರೀ ಡಿ.ಎನ್.ಎಂ. ವಕೀಲರಿಂದ

1. ಶ್ಯಾಮಶೆಟ್ಟಿಯವರಿಗೆ ಒಟ್ಟು 9 ಜನ ಮಕ್ಕಳು ಎಂದರೆ ಸರಿ. ಅವರ ಪೈಕಿ 4 ಗಂಡು ಹಾಗೂ 5 ಹೆಣ್ಣು ಮಕ್ಕಳು ಎಂದರೆ ಸರಿ. ಅವರ ಪೈಕಿ ಮೊದಲನೆಯವರು ಅಣ್ಣಯ್ಯ, 2 ನೆಯವರು ಸುಬ್ಬಮ್ಮ ಎಂದರೆ ಸರಿ. 3 ನೆಯವರು ಸರೋಜಮ್ಮ ಎಂದರೆ ಸರಿಯಲ್ಲ ನರಸಿಂಹಶೆಟ್ಟಿ 3 ನೆಯವರು ಎಂದು ನುಡಿಯುತ್ತಾರೆ. 4 ನೆಯವರು ಸರೋಜಮ್ಮ ಆಗಿರುತ್ತಾರೆ. 5 ನೆಯವರು ಜಯಮ್ಮ ಎಂದರೆ ನನಗೆ ಗೊತ್ತಿಲ್ಲ. 6 ನೆಯವರು ದಾಸಪ್ಪ, 7 ನೆಯವರು ಗೌರಮ್ಮ ಎಂದರೆ ನನಗೆ ಗೊತ್ತಿಲ್ಲ. 8 ನೆಯವರು ಲಲಿತಮ್ಮ ಎಂದರೆ ನನಗೆ ಗೊತ್ತಿಲ್ಲ. 9 ನೆಯವರು ಶ್ರೀನಿವಾಸ ಎಂದರೆ ಅವರು 8 ನೆಯವರೋ ಅಥವಾ 9 ನೆಯವರೋ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಹೆಣ್ಣು ಮಕ್ಕಳನ್ನು ಉದ್ದೇಶ ಪೂರ್ವಕವಾಗಿ ಕೈಬಿಡಲಾಗಿದೆ ಎಂದರೆ ಸರಿಯಲ್ಲ. ಶ್ರೀನಿವಾಸರವರು ತೀರಿಕೊಂಡಿರುತ್ತಾರೆ ಎಂದರೆ ಸರಿ. ಆತನಿಗೆ 3 ಜನ ಮಕ್ಕಳು ಅವರೆಂದರೆ ರಾಜೇ, ಗಿರೀಶ ಹಾಗೂ ವಿನೂತ ಎಂದರೆ ಸರಿ. ಈ ದಾವೆಯಲ್ಲಿ ವಿನೂತರವರನ್ನು ಕೈಬಿಡಲಾಗಿದೆ ಎಂದರೆ ಸರಿ. 1983 ರಲ್ಲಿ ನಾವೆಲ್ಲರೂ ಮೌಖಿಕವಾಗಿ ವಿಭಾಗಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಭಾಗಕ್ಕೆ ಬಂದ ಸ್ವತ್ತನ್ನು ಮಾರಾಟ ಮಾಡಿ ನಾವು ಬೇರೆ ಸ್ವತ್ತು ಖರೀದಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 2 ನೆಯವರಿಗೆ ಭಾಗ ನೀಡಬೇಕಾಗುತ್ತದೆ ಎಂಬ ಕಾರಣದಿಂದ ಸುಳ್ಳು ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಬರಬೇಕಾದ ಭಾಗವನ್ನು ಈಗಾಗಲೇ ನಾವು ಪಡೆದಿದ್ದೇವೆ ಎಂದರೆ ಸರಿಯಲ್ಲ.

ಪಾಟೀ ಸವಾಲು 8 ಮತ್ತು 9 ನೇ ಪ್ರತಿವಾದಿಗಳ ಪರವಾಗಿ

ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
(ನಾಗೇಶ ಮೂರ್ತಿ ಬಿ.ಕೆ.)
ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅರಕಲಗೂಡು.